'ಓಹ್, ನನಗೆ ಗೊತ್ತಿಲ್ಲ. ಬಹಳ ಹೊತ್ತಾಗಿರಬೇಕು. ಹೀಗೆಯೇ ಮರದ ಕೊರಡಿನಂತೆ ಸುಮ್ಮನೆ ಮಲಗಿರಲು ನನ್ನಿಂದ ಸಾಧ್ಯವೇ ಇಲ್ಲ... ನನಗೆ ಬಹಳ ಆಯಾಸವಾಗಿದೆ. ಅಲ್ಲದೆ, ಒಂದು ಸಲ ಹಾಯಾಗಿ ಕೆಮ್ಮಬೇಕೆಂದು ಅನಿಸುತ್ತಿದೆ.'

ಅವನು ಸುಳ್ಳು ಹೇಳುತ್ತಿದ್ದಾನೆಂದು ಎನ್ನಲು ಯಾವುದೇ ಕಾರಣಗಳಿರಲಿಲ್ಲ. ಬೆಚ್ಚನೆಯ ಜಾಗಗಳನ್ನು ಹುಡುಕಿ ಕೊಳಕು ಮಂಡಲಗಳು ಹಾಸಿಗೆಗೆ ಬಂದಿರುವ ನಿದರ್ಶನಗಳು ಬಹಳಷ್ಟಿದ್ದವು. ಅಚ್ಚರಿಯ ಸಂಗತಿಯೆಂದರೆ ಅದು ಹ್ಯಾರಿಯನ್ನು ಇನ್ನೂ ಕಚ್ಚದಿರುವುದು. ಬಂಗಾಳದಲ್ಲಿ, ಅದೂ ಹಳ್ಳಿಗಳಲ್ಲಿ, ಕೊಳಕು ಮಂಡಲಗಳು ಕಚ್ಚಿ ಸತ್ತಿರುವ ಜನರಿಗೆ ಲೆಕ್ಕವಿರಲಿಲ್ಲ.

'ನೀನು ಗಾಬರಿಯಾಗಬೇಡ ಹ್ಯಾರಿ. ಏನು ಮಾಡಬಹುದೆಂದು ನಾವು ಯೋಚಿಸೋಣ...' ನಾನೂ ಅವನಂತೆಯೇ, ಗುಟ್ಟಾಗಿ ಹೇಳುವಂತೆ ಉಸುರಿದೆ. 'ನೀನು ಕಿಂಚಿತ್ತೂ ಮಿಸುಕಾಡಬೇಡ. ನೀನು ನಿಶ್ಚಲನಾಗಿದ್ದರೆ ಅದು ಖಂಡಿತಾ ಕಚ್ಚುವುದಿಲ್ಲ.'

ನಾನು ನಿಶ್ಶಬ್ದವಾಗಿ ಬರಿಗಾಲಿನಲ್ಲೇ ಅಡುಗೆ ಕೋಣೆಗೆ ಹೋಗಿ ಹರಿತವಾದ ಚೂರಿಯಂದನ್ನು ಎತ್ತಿಕೊಂಡು ಜೇಬಲ್ಲಿರಿಸಿದೆ. ಒಂದುವೇಳೆ ಅದು ಹ್ಯಾರಿಯನ್ನೇನಾದರೂ ಕಚ್ಚಿದರೆ ತಕ್ಷಣ ಆ ಕಚ್ಚಿದ ಜಾಗವನ್ನು ಹೆರೆದು ವಿಷವನ್ನು ಹೊರತೆಗೆಯಲು ನಾನು ಯೋಚಿಸಿದ್ದೆ. ಹ್ಯಾರಿ ನಿಶ್ಚಲನಾಗಿ ಅಂಗಾತ ಮಲಗಿ ಮೇಲೆ ಸೂರನ್ನೇ ನೋಡುತ್ತಿದ್ದ. ಅವನು ಶ್ವಾಸ ತೆಗೆದುಕೊಳ್ಳುತ್ತಿರುವುದೂ ಗೊತ್ತಾಗುತ್ತಿರಲಿಲ್ಲ. ಅವನ ಮುಖ ಬೆವರಿನಿಂದ ತೊಯ್ದು ಹೋಗಿತ್ತು. ನಾನು ಮಂಚದ ಬಳಿ ಸಾಗುತ್ತಿದ್ದಂತೆಯೇ ಅವನ ಕಣ್ಣುಗಳು ನನ್ನನ್ನು

